

ತಂಗಾಳಿಯ ಹಾಗೆ ಕಂಡೆ. ನನ್ನ ರಕ್ತ ಮಾಂಸ ಹಂಚಿಕೊಂಡು ಹುಟ್ಟಿದ ಮಗುವಿನ ಹಾಗೆ ಕಂಡೆ. ಹೆರಿಗೆಯ ಸುಖಮಯ ಯಾತನೆಯ ನೀಡಿದ, ನಾನು ಸಾಕಿ ಸಲಹಿದ ನನ್ನ ನಲುಮೆಯ 'ಸರ್ಪದಮನ!'– ನನ್ನಹಾಗೆ ಕಂಡೆ!

ನಿನಗೆ ತಿಳಿಯದು ಚೈತ್ರ. ನಾನೆಷ್ಟು ಗಟ್ಟಿಯೋ ಅಷ್ಟೇ ಬಲಹೀನಳು. ನೀನೇ ಪಸರಿಸಿದ ಕೆಂದೂಳು ಕಂಡರೆ ನನಗೆ ಉನ್ಮಾದ ಉಕ್ಕುತ್ತದೆ. ಅದರಲ್ಲಿ ಕಳೆದುಹೋಗಿಬಿಡಬೇಕೆನಿಸುತ್ತದೆ.

ಚೈತ್ರ, ನಾ ಕಳೆದ ಘೋರ ಏಕಾಂತ, ಯಾತನೆಯ ಬಿಸಿಯುಸಿರ ಕಥೆಗಳನ್ನೆಲ್ಲ ನನ್ನ ಮಡಿಲಲ್ಲಿ ನಿನ್ನನ್ನು ಮಗುವಿನಂತೆ ಮಲಗಿಸಿಕೊಂಡು, ಕೂದಲಲ್ಲಿ ಬೆರಳಾಡಿಸುತ್ತ ಬಿಟ್ಟು ಬಿಟ್ಟು ಹೇಳುತ್ತೇನೆ. ನೀನು ಕೇಳು.

ಆದರೆ– ನನಗೆ ಭಯವಿದೆ. ನನ್ನ ಚೈತ್ರನನ್ನು ಅರೆಗಳಿಗೆ ನನ್ನ ಒಡಲಲ್ಲಿ ಹುದುಗಿಕೊಳ್ಳಲು ಈ ಜಗತ್ತು ಅವಕಾಶವೀಯುತ್ತದೆಯೆ?

ಬೇಡವೇ ಬೇಡ. ಬೇಡವಾದುದ್ದನ್ನು ಬಲವಂತವಾಗಿ ಪಡೆದ ಈ ಹತಭಾಗ್ಯೆಗೆ ಬೇಕಿರುವುದು ಹೇಗೆ ಪಡೆಯಬೇಕೆಂಬುದು ಗೊತ್ತಿದೆ.

ಈ ವರೆಗೆ ನನಗೇ ಅರಿವಿರದ – ಅತ್ಯಪೂರ್ವ ಕಾಂತತ್ವದ, ನನಗಾಗಿಯೇ ಬೇರೆ ಲೋಕದಿಂದ ಹುಟ್ಟು ಪಡೆದು ದಿವ್ಯತೆಯನ್ನು ಮೈದುಂಬಿಕೊಂಡು ಯಾವುದೋ ವ್ಯಕ್ತಿ ಬರುತ್ತಾರೆಂದು ಕಾದೆ. ನಾನವರ ಮುಂದೆ ಮಗುವಾಗ ಬಯಸಿದ್ದೆ. ಆದರೆ ಬಂದವರ್ಯಾರೂ ಅಂಥವರಾಗಿರಲಿಲ್ಲ. ಒಡಹುಟ್ಟಿದವರು, ಸಂಬಂಧಿಗಳು, ಸ್ನೇಹಿತರು, ಯಾರೂ ನೋವಲ್ಲಿ ನನ್ನನ್ನು ಕಂಡಾಗ ಮುಖಹೊರಳಿಸಿದರು. ಆಗಲೆಲ್ಲ ನನಗನಿಸುತ್ತಿತ್ತು – ಬರಬೇಕಾದವರು ಇವರಲ್ಲ – ಬರುವವರಿನ್ನೂ ಜನ್ಮ ಪಡೆದೇ ಇಲ್ಲ – ಎಂದು.

ಈಗ ನೀ ಬಂದೆ. ಕಣ್ಣಲ್ಲೇ ನನ್ನ ನೋವಿಗೆ ಶಮನಕೊಟ್ಟೆ. ನನಗಾಗಿ ಮಿಡಿದ ನಿನ್ನ ಕಣ್ಣಿನ ಒಂದು ಹನಿ ನೀರು ನನ್ನ ದುಗುಡವನ್ನೆಲ್ಲ ಕಳೆಯಿಸಿತು.

ತಮ್ಮ ಎದೆಯಲ್ಲಿ ಮಾರಣವೇದನೆ ಸಲಹಿದ್ದರೆ ಅಂಥವರಿಗೆ ನನ್ನ ದಹಿಸಿದ ಬೇಗುದಿ ಹೇಳೇನು. ಆದರೆ – ನೆನಪಿರಲಿ, ಅದು ಅಪೂರ್ಣವೆನ್ನಿಸೀತು. ಕುತೂಹಲಕಾರಿಯಲ್ಲ ಅನ್ನಿಸಿತು. ಆದರೆ ಹೆಣ್ಣನ್ನು, ಆಕೆಯ ಮಗು ಮನಸ್ಸನ್ನು ತಿಳಿದವರಿಗೆ ಇದರ ಸಂಕಟ ತಿಳಿದೀತು.

ಎಂಥ ಚೆಂದದ ಹೆಸರಿಟ್ಟಿದ್ದಾನೆ ನಿನ್ನ ತಂದೆ. ಹೆಸರಿಗೆ ಅನ್ವರ್ಥವಾಗುವ ಹಾಗಿದ್ದೀಯ ನೀನು! ಅಂದೆಯಲ್ಲವೆ ಚೈತ್ರ? ಅಲ್ಲಿಂದಲೇ ಮೊದಲು ಮಾಡುತ್ತೇನೆ.

★★★

ಹುಗಲಿಲ್ಲ ನಿನಗೆ. ಓ! ಬಿಯದ. ಇದು ಪಕ್ಷಿ ಕಾಶಿ!

ಸುನಯನ ನನ್ನೂರಿನ ನದಿಯ ಹೆಸರು. ಅಪ್ಪ ನನಗಿಟ್ಟ ಹೆಸರು. ನನ್ನ ಅಗಲ ಕಂಗಳಲ್ಲಿ